ಶ್ರೀ ಸಿ.ಎಸ್. ಪುಟ್ಟೇಗೌಡ ; ಖಂಡಿತವಾಗಿಯೂ ಹೇಳಬೇಕಾಗಿದೆ. ಮಾನ್ಯ ಚನ್ನಿಗಪ್ಪನವರು ಡಿಪಿಎಆರ್‌ಗೆ ಕಳುಹಿಸಿದ್ದೇವೆ, ಪರಿಶೀಲಿಸುತ್ತೇವೆ. ನೋಡುತ್ತೇವೆ, ಇವೆಲ್ಲಾ ಸಾಮಾನ್ಯವಾಗಿ 1947 ನೇ ಇಸವಿಯಿಂದ ಹೇಳುವಂಥ ಮಾತು.

(ಗೊಂದಲ)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆ ಸಂಖ್ಯೆ 180(2345) ಅನ್ನು ತಡೆಹಿಡಿಯಲಾಗಿದೆ.

1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2402

2 ಸದಸ್ಯರ ಹೆಸರು : ಶ್ರಿ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

3 ವಿಷಯ : ರೈತರಿಗೆ ಬೋನಸ್ ಹಣ ಬಿಡುಗಡೆ

4 ಉತ್ತರಿಸುವ ಸಚಿವರು : ಶೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು)

ಕ್ರ.ಸಂ. ಪ್ರಶ್ನೆ

ಅ. 2004–05ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ರೈತರಿಗೆ ಬಾಕಿ ಕೊಡಬೇಕಾಗಿರುವ ಬೋನಸ್ ಹಣ ಎಷ್ಟು.

ಉತ್ತರ

2004–05ನೇ ಸಾಲಿನ ಜನವರಿ 2005 ರ ಅಂತ್ಯದವರೆಗೆ ರೂ.221.37 ಲಕ್ಷ ಬೋನಸ್ ಪಾವತಿಸಬೇಕಾಗಿದ್ದು, ಇದರಲ್ಲಿ ಅಕ್ಟೋಬರ್ ಅಂತ್ಯದವರೆಗಿನ ಬೋನಸ್ ಮೊತ್ತ ರೂ.173.81 ಲಕ್ಷಗಳನ್ನು ಬಿತ್ತನೆ ರೈತರಿಗೆ ಪಾವತಿಸಲಾಗಿದೆ. ನವೆಂಬರ್ ಡಿಸೆಂಬರ್ 2004 ಮತ್ತು ಜನವರಿ 2005 ಮಾಹೆಗಳ ಬೋನಸ್ ಮೊತ್ತ ರೂ. 47.56 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ.

ಕ್ರ.ಸಂ. ಪ್ರಶ್ನೆ

ಆ. ಯಾವಾಗ ಬಾಕಿ ಹಣವನ್ನು ರೈತರಿಗೆ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು)

ಉತ್ತರ

ಜನವರಿ 2005ರ ಅಂತ್ಯದವರೆಗಿನ ಬೋನಸ್ ಮೊತ್ತವನ್ನು ಬಿತ್ತನೆ ಬೆಳೆಗಾರರಿಗೆ ಮಾರ್ಚ್ 31–3–2005 ರೊಳಗಾಗಿ ಪಾವತಿಸಲಾಗುವುದು.

ಶ್ರೀ ಹೆಚ್ ಸಿ ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳತಕ್ಕದ್ದು ಸನ್ಮಾನ್ಯ ಮಂತ್ರಿಗಳಲ್ಲಿ ಇಷ್ಟೇನೆ. ಈ ಬಿತ್ತನೆ ವಲಯದಲ್ಲಿ ಬೋನಸ್ ಹಣವನ್ನೇನು ಕೊಡುತ್ತಾರೆ. ಅದನ್ನು ಆರು ತಿಂಗಳಿಗೋ ವರ್ಷಕ್ಕೋ ಕೊಡತಕ್ಕ ಒಂದು ಪರಿಪಾಠವನ್ನು ಇಲಾಖೆಯವರು ಬೆಳೆಸಿಕೊಂಡಿದ್ದಾರೆ. ದಯಮಾಡಿ ಅದನ್ನು ಪ್ರತಿತಿಂಗಳೂ ಬಿಡುಗಡೆ ಮಾಡಬೇಕು. ಎರಡನೆಯದಾಗಿ, ಈ ಬೋನಸ್ ಹಣವನ್ನು ಸನ್ಮಾನ್ಯ ಸಭಾಧ್ಯಕ್ಷರು ರೇಷ್ಮೆ ಮಂತ್ರಿಗಳಾಗಿದ್ದಾಗ ಹತ್ತು ರೂಪಾಯಿ ಜಾಸ್ತಿ ಮಾಡಿದ್ದರು. ಸುಮಾರು ಎಲ್ಲಾ ಮಂತ್ರಿಗಳೂ ಕೂಡ ಬಂದ ಸಂದರ್ಭದಲ್ಲಿ ರೈತರ ಕಷ್ಟವನ್ನು ಅರ್ಥ ಮಾಡಿಕೊಂಡು ಹತ್ತು-ಹತ್ತು ರೂಪಾಯಿ ಜಾಸ್ತಿ ಮಾಡಿಕೊಂಡು ಬಂದಿದ್ದಾರೆ. ಈಗ ಸನ್ಮಾನ್ಯ ಚೆನ್ನಿಗಪ್ಪನವರು ಕೂಡ ಈ ರೇಷ್ಮೆ ಇಲಾಖೆಯಲ್ಲಿ ಎಲ್ಲಾ ತಿಳಿದುಕೊಂಡಿರುವವರು. ದಯಮಾಡಿ ತಾವು ಕೂಡ ಬೋನಸ್ ಹಣವನ್ನು ಜಾಸ್ತಿ ಮಾಡುತ್ತೀರಾ ಎಂದು ಹೇಳಿ ಇಲ್ಲಿ ಹೇಳಬೇಕಾಗುತ್ತದೆ. ಜೊತೆಗೆ ಇವತ್ತು ನಾವು ಬಿತ್ತನೆ ವಲಯದಲ್ಲಿ ಬೇರೆ ಏನು ಕೂಡ ಬೆಳೆಯುವುದಕ್ಕಾಗುವುದಿಲ್ಲ. ನಮಗೊಂದು ಕಟ್ಟುಪಾಡು ಇದೆ. ಅದರಿಂದ ನಾವು ಬೆಳೆಯತಕ್ಕ ಗೂಡು. ನೀವು ಫಿಕ್ಸ್ ಮಾಡಿ. ಇಷ್ಟು ಮೊಟ್ಟೆಗೆ ಇಷ್ಟು ಗೂಡನ್ನು ಬೆಳೆಯಿರಿ ಎಂದು ಹೇಳಿ. ಆ ಗುಣಮಟ್ಟ ಇರುವ ಗೂಡನ್ನು ಅವರ ಎಲ್ಲಾ ಗೂಡನ್ನು ಕೂಡ ಒಂದು ರೇಟು ಫಿಕ್ಸ್ ಮಾಡಿ ಸರ್ಕಾರದಿಂದ ಪರ್ಚೇಸ್ ಮಾಡತಕ್ಕ ಒಂದು ಕ್ರಮವಾಗಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ. ಮೂರನೆಯದಾಗಿ ನಮಗೂ ಕೂಡ ಇದೇನು ಮಾಡಲಿಕ್ಕಾಗದೆ ಇದ್ದರೆ ಮಿಶ್ರ ಗೂಡನ್ನು ಬೆಳೆಯುವುದಕ್ಕೆ ಸರ್ಕಾರ ಅನುಮತಿಯನ್ನು ಕೊಡುತ್ತದೆಯೇ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ ಮಾನ್ಯ ಬಾಲಕೃಷ್ಣ ಅವರು ಬಿತ್ತನೆ ಏರಿಯಾದಲ್ಲಿ ಮಾಗಡಿ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕು ಕುಣಿಗಲ್ ತಾಲ್ಲೂಕುಗಳನ್ನು ನಾವು ಮೈಸೂರು ಸೀಡ್ಸ್ ಬಿತ್ತನೆ ವಲಯವೆಂದು ಹೇಳಿ ತೀರ್ಮಾನ ಮಾಡಿದ್ದೇವೆ. ಅಂದರೆ ಆ ಒಂದು ಬಿತ್ತನೆ ಏರಿಯಾದಲ್ಲಿ ಬೆಳೆಯತಕ್ಕ ರೈತರಿಗೆ ಸರ್ಕಾರ ಉತ್ತಮವಾದ ತಳಿಯನ್ನು ಕಂಡುಹಿಡಿಯಬೇಕು. ಈ ಬಿತ್ತನೆ ಕ್ರಾಸ್ ಮಾಡಿ ಎಂದು ಹೇಳಿ. ನಮ್ಮ ಇಲಾಖೆಯಿಂದ ಇವತ್ತು ಅವರಿಗೆ 40 ಪರ್‌ಸೆಂಟ್ ಸಬ್ಸಿಡಿಯನ್ನು ರೈತರಿಗೆ ನಾವು ಕೊಡುತ್ತಿದ್ದೇವೆ. ಆದರೂ ಬಾಲಕೃಷ್ಣ ಅವರನ್ನು ಮೊನ್ನೆ ಕುದೂರಿಗೆ ಹೋದಾಗ ಅನೇಕ ಜನ ರೈತರು ಬಂದು ನಮ್ಮನ್ನು ಕೇಳಿದರು.

ಸಾರ್ ನಮಗೆ ಕೊಡುತ್ತಿರತಕ್ಕ ಬೋನಸ್ ಸಾಲದು. ಜಾಸ್ತಿ ಕೊಡಬೇಕು ಎಂದು ಕೇಳಿದರು. ನಾನು ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿ ನಾನು

ಮತ್ತು ಇಲಾಖೆಯ ಅಧಿಕಾರಿಗಳು ಪರಿಶೀಲನೆ ಮಾಡಲಾಗಿ ಆ ಸೀಡ್ ಏರಿಯಾ ಜಾಸ್ತಿ ಇದ್ದು ಗುಣಮಟ್ಟದ ಗೂಡುಗಳನ್ನು ಬೆಳೆಯುವುದಕ್ಕೆ ಇವತ್ತು ರೈತರು ಹಿಂದೆ ಮುಂದೆ ಆಗಿದ್ದಾರೆ. ಕಾರಣ, ಮಳೆ ಇಲ್ಲ. ಅಲ್ಲಿ ಬೋರವೆಲ್ ನೀರು ಸರಿಯಾಗಿ ಬರುತ್ತಿಲ್ಲ. ಮತ್ತು ವಾತಾವರಣದಲ್ಲಿ ಇವತ್ತು ಬರೇ ಬೇಸಿಗೆ ಜಾಸ್ತಿ ಆದಕಾರಣ, ಸರಿಯಾಗಿ ಸೀಡ್ಸನ್ನು ತಯಾರು ಮಾಡಲಿಕ್ಕೆ ಆಗುತ್ತಿಲ್ಲವೆಂದು ಹೇಳಿ ಅನೇಕ ವೈಜ್ಞಾನಿಕ ವರದಿಗಳನ್ನು ಕೊಟ್ಟರು. ಆ ಪ್ರಕಾರ ನಾವು ಇವತ್ತು ಆ ಏರಿಯಾವನ್ನು ಕಡಿಮೆ ಮಾಡಿ ಉತ್ತಮವಾದ ಗೂಡುಗಳನ್ನು ಬೆಳೆದು ಅತೀ ಉತ್ತಮವಾದಂತಹ ತಳಿ ತೆಗೆದು ಇಡಬೇಕೆಂದು ತೀರ್ಮಾನ ಮಾಡಲಾಗಿದೆ. ಮಾನ್ಯ ಬಾಲಕೃಷ್ಣ ಅವರ ಕಳಕಳಿಯನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮ ಸರ್ಕಾರ ಇವತ್ತು ಹಣವನ್ನು ಕೊಟ್ಟಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಹಣಕಾಸು ಸಚಿವರು 39 ಕೋಟಿ ರೂಪಾಯಿ ಹಣವನ್ನು ನಮ್ಮ ಇಲಾಖೆಗೆ ಕೊಟ್ಟಿದ್ದಾರೆ. ನಾನು ಉದಾಹರಣೆಗೆ ಹೇಳುತ್ತೇನೆ. ನಾನು ಸಚಿವರಾದ ಮೇಲೆ ಬೆಳಗಾಂ, ಬಿಜಾಪುರ, ಬಾಗಲಕೋಟೆ, ಕೋಲಾರ, ಮೈಸೂರಿಗೆ ಪ್ರವಾಸ ಹೋಗಿದ್ದೇನೆ.

ಶ್ರೀ ಹೆಚ್.ಸಿ ಬಾಲಕೃಷ್ಣ : ನಾನು ಕೇಳುತ್ತಿರತಕ್ಕಂಥ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕು. ಬಾಕಿ ಎಷ್ಟು ಎಂದು ಹೇಳಲಿ ಸಾರ್.

ಶ್ರೀ ಸಿ. ಚೆನ್ನಿಗಪ್ಪ : ಹೇಳುತ್ತೇನೆ. ಒಟ್ಟು ಸೀಡ್ ಏರಿಯಾಗೆ ಕೊಡತಕ್ಕ ಬೋನಸ್ 22.1 ಮತ್ತು 37. 221.37 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ನಿಗದಿ ಮಾಡಿ ಅದರಲ್ಲಿ 173.81 ಲಕ್ಷ ಬಿಡುಗಡೆ ಆಗಿದೆ. ಇನ್ನು ಮಿಕ್ಕಂತಹ ಕೇವಲ 47.56 ಲಕ್ಷ ರೂಪಾಯಿಯನ್ನು ಈಗ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಯಾವುದೇ ಒಂದು ರೂಪಾಯಿ ಬ್ಯಾಲೆನ್ಸ್ ಇಲ್ಲದೆ ಕೊಡತಕ್ಕಂಥ ತೀರ್ಮಾನ ಮಾಡಿ, ಇವತ್ತು ಹಣ ಕೂಡ ಬಂದಿದೆ. ಅದರ ಅಕೌಂಟ್ಸ್ ತರಿಸಿಕೊಂಡು ಏಪ್ರಿಲ್ ತಿಂಗಳಲ್ಲಿ ಕೊಡತಕ್ಕ 47.56 ಲಕ್ಷ ರೂಪಾಯಿಗಳನ್ನು ಬೋನಸ್ ಅನ್ನು ಸರ್ಕಾರ ಸಂಪೂರ್ಣವಾಗಿ ಕೊಡುತ್ತದೆ. ಅದರಲ್ಲಿ ಮಾನ್ಯ ಬಾಲಕೃಷ್ಣ ಅವರು ಏನು ಅನುಮಾನ ಪಡಬೇಕಾದ್ದಿಲ್ಲ.

ಶ್ರೀ ಹೆಚ್ ಸಿ ಬಾಲಕೃಷ್ಣ :– ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ನಾನು ಕೇಳುತ್ತಿರತಕ್ಕದ್ದು ಈಗ 6 ತಿಂಗಳು. ವರ್ಷಕ್ಕೆ ಕೊಡತಕ್ಕ ಪರಿಪಾಠವನ್ನು ಬಿಟ್ಟು ಪ್ರತಿ ತಿಂಗಳೂ ರೈತರಿಗ ಬೋನಸ್ ಕೊಡುತ್ತೀರಾ? ಇದೊಂದು ಎರಡನೆಯದು ನಿಮ್ಮ ಅವಧಿಯಲ್ಲಿ ನೀವು ಕೂಡ ರೈತರ ಮಗ. ನಿಮ್ಮ ಅವಧಿಯಲ್ಲೇ ಬೋನಸ್ ಅನ್ನು ಜಾಸ್ತಿ ಮಾಡುತ್ತೀರಾ? ಬೋನಸ್ ಜಾಸ್ತಿ ಮಾಡಲಿಕ್ಕೆ ಆಗಲಿಲ್ಲ ಎಂದರೆ

ನೂರು ಮೊಟ್ಟೆಗೆ ಇಷ್ಟು ಕೇಜಿ ಗೂಡು ಬೆಳೆಯಿರಿ ಎಂದು ಫಿಕ್ಸ್ ಮಾಡಿರಿ. ಆ ಗೂಡು ಬೆಳೆಯುವುದಕ್ಕೆ ನೀವು ಒಂದು ರೇಟ್ ಫಿಕ್ಸ್ ಮಾಡಿ ಸರ್ಕಾರವೇ ಖರೀದಿ ಮಾಡುತ್ತದಾ? ಅದೂ ಆಗುವುದಿಲ್ಲವೆಂದರೆ ಮಿಶ್ರ ಗೂಡನ್ನು ಬೆಳೆಯುವುದಕ್ಕೆ ನಮಗೆ ಅವಕಾಶ ಮಾಡಿಕೊಡುತ್ತೀರಾ? ಇಷ್ಟು ಪ್ರಶ್ನೆಗೆ ನಮಗೆ ಉತ್ತರ ಬೇಕು. ನೀವು ಯಾವ್ಯಾವುದೋ ಹೇಳಿದರೆ ನಮಗೆ ಅರ್ಥ ಆಗುವುದಿಲ್ಲ.

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಬಾಲಕೃಷ್ಣ ಅವರಿಗೆ ನಾನು ಸ್ಪೆಷಲ್ ಲಾಂಗ್ವೇಜ್‌ನಲ್ಲಿ ಹೇಳುತ್ತೇನೆ. ಏಕೆಂದರೆ ಅವರು ಅರ್ಥ ಆಗುವುದಿಲ್ಲವೆಂದು ಹೇಳಿ ಬಿಟ್ಟಿರಲ್ಲ. ಅವರು ಬೆಳೆಯತಕ್ಕಂಥ ಬೆಳೆಯನ್ನು ಅವರೂ ಬೆಳೆಯುತ್ತಾರೆ. ನಾನೂ ಬೆಳೆಯುತ್ತೇನೆ. ಇಬ್ಬರಿಗೂ ಗೊತ್ತಿದೆ. ಮಾನ್ಯ ಬಾಲಕೃಷ್ಣ ಅವರು ಈಗ ಎಕ್ಸ್‌ಟ್ರಾ ಬೋನಸ್ ಕೊಡುತ್ತೀರಾ ಎಂದು ಕೇಳುತ್ತಾರೆ. ನಮ್ಮ ಸರ್ಕಾರದ ಫೈನಾನ್ಸಿಯಲ್ ಸಿಸ್ಟಂ ಅನ್ನು ನೋಡಿಕೊಂಡು ನಮ್ಮ ಹಣದ ಶಕ್ತಿ ನೋಡಿಕೊಂಡು, ಮಾನ್ಯ ಮುಖ್ಯಮಂತ್ರಿಗಳನ್ನು ಮಾನ್ಯ ಹಣಕಾಸು ಸಚಿವರನ್ನು ನಾನು ಪ್ರಾರ್ಥನೆ ಮಾಡಿಕೊಂಡು ಕೇಳಿದ್ದೇನೆ. ಸಾರ್ ಹೆಚ್ಚಿಗೆ ಹಣ ಕೊಡಬೇಕು, ಬೋನಸ್ ಕೊಡಬೇಕಾಗುತ್ತದೆ. ಗೂಡಿಗೆ ರೇಟ್ ಫಿಕ್ಸ್ ಮಾಡಬೇಕು ಎಂದು ಕೇಳಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ. ನೋಡಿ. ಸ್ವಲ್ಪ ಪರಿಶೀಲನೆ ಮಾಡಿ ಜೂನ್ ಅಂಡ್ ಜುಲೈ ತಿಂಗಳಲ್ಲಿ ರೈತರ ಪರಿಸ್ಥಿತಿ ಮತ್ತು ಬೆಳೆಯ ಪರಿಸ್ಥಿತಿ ನೋಡಿ ನಮಗೆ ಎಷ್ಟು ಲಕ್ಷ ಮೆಟ್ರಿಕ್ ಟನ್ ರೇಷ್ಮೆ ಕಡಿಮೆ ಇದೆ. ಅದರ ಸಮನಾಗಿ ಬೆಳೆಯತಕ್ಕಂಥ ಒಂದು ಉತ್ತಮವಾದಂತಹ ನೀತಿಯನ್ನು ಹಾಕಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ತಾವು ಕಳಕಳಿಯಾಗಿ ಇವತ್ತೇನು ಕೇಳಿದ್ದೀರಿ ಈ ಸರ್ಕಾರ ಎಲ್ಲರ ಸರ್ಕಾರ.

ಶ್ರೀ ಹೆಚ್ ಸಿ ಬಾಲಕೃಷ್ಣ :– ಬೋನಸ್ ನಿಮ್ಮ ಕಾಲದಲ್ಲಿ ಜಾಸ್ತಿ ಮಾಡುತ್ತೀರಾ?

ಶ್ರೀ ಸಿ. ಚೆನ್ನಿಗಪ್ಪ :– ಮಾನ್ಯ ಬಾಲಕೃಷ್ಣ ಅವರು ಬಹಳ ಆತುರರಾಗಿದ್ದಾರೆ. ಇವರು ಭಾರಿ ಮುಂದೆ ಹೋಗುತ್ತಾರೆ. ಸ್ವಲ್ಪ ದಯಮಾಡಿ ಕೇಳಿ. ಈ ಸರ್ಕಾರ ರೈತರ ಪರವಾದ ಸರ್ಕಾರ. ಎರಡು ಮಾತಿಲ್ಲ. ಈ ಸರ್ಕಾರ ಯಾವುದೇ ಕಾಲಕ್ಕೂ ಬಡವರ ಸಾಮಾನ್ಯ ಜನರ, ದೀನದಲಿತರ ಸರ್ಕಾರ. ಮಾನ್ಯ ಧರ್ಮಸಿಂಗ್ ಅವರಿಗೆ ಮೊನ್ನೆ ಒಂದು ಲೆಟರ್ ಕೊಟ್ಟು ಇದು ಆಗಬೇಕು. ನಮಗೆ ಕಡಿಮೆ ದುಡ್ಡು ಇದೆ. ಸಬ್ಸಿಡಿ ಕೊಡಬೇಕೆಂದು ಕೇಳಿದಾಗ ನಮಗೆ 39 ಕೋಟಿ ರೂಪಾಯಿ ಹಣವನ್ನು ಈ ಒಂದು ಬಜೆಟ್‌ನಲ್ಲಿ ಬಿಡುಗಡೆ ಮಾಡಿಸಿ ಕೊಟ್ಟರು. ಈ ಐದು ವರ್ಷದಿಂದ ರೇಷ್ಮೆಗೆ ಬಜೆಟ್ ಬುಕ್‌ನಲ್ಲಿ ಹಣ ಬರುತ್ತಿರಲಿಲ್ಲ. ಈ ವರ್ಷ ಮಾತ್ರ

ಬಂದಿದೆ. ದಯಮಾಡಿ ನೋಡಬಹುದು. ಅಂದರೆ ನಿಮ್ಮ ಕಳಕಳಿಯ ಪ್ರಕಾರ ಸೀಡ್ಸ್ ಏರಿಯಾದ ರೈತ ಬಂಧುಗಳಿಗೆ ಈ ಸರ್ಕಾರ ಜೂನ್ ತಿಂಗಳಿಂದ 10 ರೂಪಾಯಿ ಎಕ್ಸ್‌ಟ್ರಾ ಬೋನಸ್ ಅನ್ನು ಕೊಟ್ಟೇ ಕೊಡುತ್ತೇವೆ.

ಅಧ್ಯಕ್ಷರು : ಆಯಿತಲ್ಲ.

ಶ್ರೀ ಸಿ.ಚೆನ್ನಿಗಪ್ಪ ; ಪೇಮೆಂಟ್ ಬಗ್ಗೆ ಕೇಳಿದ್ದೀರಿ. ಪೇಮೆಂಟನ್ನು ಪ್ರತಿ ಎರಡು ತಿಂಗಳಿಗೆ ಒಂದು ಸಾರಿ ಅಂದರೆ 60 ದಿವಸಕ್ಕೆ ಒಂದು ಸಾರಿ ಮನೆ ಬಾಗಿಲಿಗೆ ಚೆಕ್ ಅನ್ನು ಕೊಡತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ. ನಮ್ಮ ರಾಜ್ಯದ ರೈತರಿಗೆ, ಸೀಡ್ಸ್ ಏರಿಯಾ ಕಡಿಮೆ ಮಾಡಬೇಕು. ಕಡಿಮೆ ಮಾಡಿದರೆ ಹೆಚ್ಚಿಗೆ ಬೆಳೆಯುತ್ತೇವೆ. ಎಂದು ಹೇಳುತ್ತೀರಿ. ನಿಮ್ಮನ್ನು ನಾನು ಸಭೆಗೆ ಕರೆಯುತ್ತೇನೆ. ದಯಮಾಡಿ ನಾವು, ನೀವು ರೈತರು ಕುಳಿತುಕೊಂಡು ಚಿಂತನೆ ಮಾಡಿ, ಎಷ್ಟು ಎಕರೆ ಕಡಿಮೆ ಮಾಡಬೇಕು? ಎಷ್ಟು ಉತ್ತಮವಾದ ಗೂಡನ್ನು ಬೆಳೆಯಬೇಕು ಎಂಬ ತೀರ್ಮಾನವನ್ನು ಅಲ್ಲಿ ಮಾಡಿ. ಅದನ್ನು ಇಲ್ಲಿ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿಟ್ಟುಕೊಂಡು ಏನು ತೀರ್ಮಾನ ಮಾಡುತ್ತಾರೋ ಮಾಡಿಕೊಂಡು ರೈತರಿಗೆ ಮತ್ತು ಸರ್ಕಾರಕ್ಕೆ ಅನುಕೂಲ ಆಗತಕ್ಕ ರೀತಿಯಲ್ಲಿ, ಒಳ್ಳೆಯ ಹೆಸರು ಬರುವ ರೀತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ತಮ್ಮ ಸೂಚನೆಯನ್ನು ಪಡೆಯುತ್ತೇನೆ. ನಾನು ಮಂತ್ರಿ ಆದರೂ ದೊಡ್ಡಸ್ತಿಕೆ ಅಲ್ಲ. ಈ ರಾಜ್ಯದ ಜನರ ಶ್ರೇಯ ಮಾಡಬೇಕೆಂದು ಹೊರಟಿರತಕ್ಕ ಜನ ನಾವು. ಆದ್ದರಿಂದ ನಿಮ್ಮ ಸೂಚನೆ ಮತ್ತು ರೈತರ ಸೂಚನೆಯನ್ನು ಪಡೆದುಕೊಂಡು ಈ ಸರ್ಕಾರ ಕೆಲಸ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇಂತಹ ಭರವಸೆ ಕೊಟ್ಟಂತಹ ಸಚಿವರನ್ನು ನಾನು 1967ರಿಂದ ನೋಡಲೇ ಇಲ್ಲ. ಇದೇ ಪ್ರಪ್ರಥಮ ಹೋಗಿ.

(ಸದನದಲ್ಲಿ ನಗು)

ಅಧ್ಯಕ್ಷರು ; ಈಗ ಸದನವನ್ನು ನಾಳೆ ಬೆಳಿಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ವಿಧಾನಸಭೆಯ ಕಾರ್ಯಕಲಾಪವು ಸಂಜೆ 5–55ಕ್ಕೆ ಮುಕ್ತಾಯವಾಗಿ ದಿನಾಂಕ 18–03–2005ರಂದು ಶುಕ್ರವಾರ ಬೆಳಿಗ್ಗೆ 10–00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)